## ೮. ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಕೋಡಂಬಿ, ಸೊರಬ




### ಮೊದಲ ಮಾತು

ಕರ್ನಾಟಕ ಸರ್ಕಾರವು ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಮಕ್ಕಳಿಗೆ ನಲಿಯುತ್ತಾ ಕಲಿಕೆಯನ್ನು ಕಲಿಯುವ ಉದ್ದೇದಿಂದ ನಲಿ–ಕಲಿ ಎಂಬ ವಿನೂತನ ಕಲಿಕಾ ವಿಧಾನವನ್ನು ಮೊದಲ ಬಾರಿಗೆ ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲ್ಲೂಕಿನ 1995–96 ರಲ್ಲಿ ಪ್ರಾಯೋಗಿಕವಾಗಿ ನಲಿ– ಕಲಿ ಪದ್ಧತಿಯನ್ನು ಜಾರಿಗೆ ತರಲಾಯಿತು. ನಂತರ ಹಂತ–ಹಂತವಾಗಿ 2009–10 ರಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ ಕಿರಿಯ/ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 1 ಮತ್ತು 2ನೇ ತರಗತಿಗಳಿಗೆ ನಲಿ–ಕಲಿ ಪದ್ಧತಿಯನ್ನು ಜಾರಿಗೆ ತಂದಿತು. ನಂತರ 2010–11 ನೇ ಸಾಲಿನಲ್ಲಿ ರಾಜ್ಯಾದ್ಯಂತ 3ನೇ ತರಗತಿಗೆ ಈ ನಲಿ–ಕಲಿ ಪದ್ಧತಿಯನ್ನು ವಿಸ್ತರಿಸಲಾಯಿತು.

ರಾಜ್ಯದ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ 1 ರಿಂದ 3ನೇ ತರಗತಿಗೆ ನಲಿ–ಕಲಿ ಬೋಧನಾ ಪದ್ಧತಿಯನ್ನು ಅನಿಷ್ಠಾನಗೊಳಿಸಿರುವುದರಿಂದ ಬಹುವರ್ಗ ಮತ್ತು ಬಹುಹಂತದ ತರಗತಿಯ ಪ್ರಕ್ರಿಯೆಯಾಗಿದ್ದು, ಈ ಪದ್ಧತಿಯಲ್ಲಿ ಸ್ಥ–ಕಲಿಕೆ, ಸ್ವ–ವೇಗದ ಕಲಿಕೆ, ಸಂತಸದ ಕಲಿಕೆ ಎಂಬ ಮೂರು ತತ್ವಗಳನ್ನು ಒಳಗೊಂಡ ಮಕ್ಕಳ ಗುಣಮಟ್ಟದ ಶಿಕ್ಷಣ ನೀಡುವಿಕೆಗೆ ಬುನಾದಿಯಾಗಿದೆ.

### ನಲಿ–ಕಲಿ ವಿಧಾನದ ವಿಶೇಷತೆ

* ಬಹುವರ್ಗ * ಬಹುಹಂತದ ಕಲಿಕೆ * ಕಲಿಕಾಂಶಗಳು * ಕಲಿಕಾಗೋಪುರ * ಮೈಲಿಗಲ್ಲು * ಚಟುವಟಿಕೆಯ ವಿಧಾನ

### ತರಗತಿ ಕೋಣೆಯಲ್ಲಿ ನಡೆಯುವ ಪ್ರಕ್ರಿಯೆಗಳು

* ಕಲಿಕಾ ಏಣಿ * ಮೆಟ್ಟಿಲು * ಲೋಗೋ * ಪ್ರಗತಿನೋಟ * ಕಾರ್ಡಗಳು

* ವಾಚಕಗಳು * ಅಭ್ಯಾಸ ಪುಸ್ತಕ, ವಾಲ್ ಸ್ಲೇಟ್ * ಕಲಿಕಾ ಚಪ್ಪರ * ಗುಂಪು ತಟ್ಟೆಗಳು

### ನಮ್ಮ ನಲಿ–ಕಲಿ ಯಶೋಗಾಥೆ

2018–19 ನೇ ಸಾಲಿನಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕೋಡಂಬಿ, ಹರೀಶಿ ಕ್ಲಸ್ಟರ್ ಸೊರಬ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಚಿಕ್ಕ ಗ್ರಾಮ, ತಾಲ್ಲೂಕು ಕೇಂದ್ರದಿಂದ 35 ಕಿ.ಮೀ. ದೂರದಲ್ಲಿದ್ದು ಶಾಲೆಯ ಸುತ್ತಮುತ್ತಲೂ ಸುಂದರವಾದ ಹೊಲ ಗದ್ದೆಗಳು, ಮರಗಿಡಗಳಿಂದ ಕಂಗೊಳಿಸಿತ್ತಿದ್ದು, ಶಾಲೆಯ ಮುಂಭಾಗವು ಕೂಡ ಹಸಿರಾದ ಬೆಟ್ಟ

ಗುಡ್ಡಗಳಿಂದ ಸುತ್ತುವರೆದಿದೆ. ಈ ಶಾಲೆಯಲ್ಲಿ ಪ್ರಸ್ತುತ ಒಬ್ಬ ಶಿಕ್ಷಕಿ ಹಾಗೂ 1 ರಿಂದ 5 ನೇ ತರಗತಿಯವರೆಗೆ ಒಟ್ಟು 16 ಮಕ್ಕಳು ಅಭ್ಯಾಸ ಮಾಡುತ್ತಿದ್ದಾರೆ. ನಲಿ–ಕಲಿ ಕೊಠಡಿಯ ಹೊರಭಾಗವು ರೈಲಿನ ಮಾದರಿಯ ಬಣ್ಣದಿಂದ ಆಕರ್ಷಕವಾಗಿ ಕಂಗೊಳಿಸುತ್ತಿದೆ. ಇದಕ್ಕೆ ನಲಿ–ಕಲಿ ಎಕ್ಸಪ್ರೆಸ್ ಎಂದು ಹೆಸರಿಡಲಾಗಿದೆ.

ನಲಿ–ಕಲಿ ಎಕ್ಸಪ್ರೆಸ್‌ನ ಒಳಭಾಗದಲ್ಲಿ ತರಗತಿ ಕೋಣೆಯ ಜಾಗದ ಲಭ್ಯತೆಗೆ ಅನುಗುಣವಾಗಿ ಗುಂಪು ತಟ್ಟೆಗಳನ್ನು ಬಿಡಿಸಲಾಗಿದೆ. ಇಲ್ಲಿನ ಗುಂಪು ತಟ್ಟೆಗಳ ವಿಶೇಷತೆ ಏನೆಂದರೆ, ಮಕ್ಕಳಿಗೆ ಇಷ್ಟವಾಗುವ ಆಯ್ಕೆಯನ್ನು ಅವರಿಂದಲೇ ಕೇಳಿ ತಿಳಿದು ಹೆಚ್ಚಿನ ಮಕ್ಕಳು ಆಯ್ಕೆ ಮಾಡಿದ ಗೊಂಬೆಯ ಆಕಾರವನ್ನು ಬಿಡಿಸಲಾಗಿದೆ. ಇದನ್ನು ಸ್ವತಃ ಶಿಕ್ಷಕರೇ ಬಣ್ಣದಲ್ಲಿ ರಚಿಸಿರುವುದು ವಿಶೇಷತೆ.










ಮಕ್ಕಳ ಕೈಯಿಗೆ ಸಿಗುವಹಾಗೆ ಎಲ್ಲಾ ವಿಷಯಗಳ ಕಲಿಕಾ ಸಾಮಾಗ್ರಿಗಳನ್ನು ರ್‍ಯಾಕ್ ನ ಮೇಲೆ ಜೋಡಿಸಲಾಗಿದೆ. ಹಾಗೆಯೇ ಪ್ರಗತಿ ನೋಟವನ್ನು ಬೇರೆ ಬೇರೆ ಬಣ್ಣದ ಹಾಳೆಯ ಮೂಲಕ ಮೇಲು ಕಾಗದವನ್ನು ಹಾಕಿ ಆಕರ್ಷಕವಾಗಿ ಇರಿಸಲಾಗಿದೆ. ಎಲ್ಲಾ ಏಣಿಗಳ ಕಾರ್ಡುಗಳನ್ನು ವಿಷಯವಾರು ಜೋಡಿಸಲಾಗಿದೆ. ವಾಚಕಗಳು ಹಾಗೂ ಹವಾಮಾನ ನಕ್ಷೆಯು ಮಕ್ಕಳ ಕೈಗೆ ಸಿಗುವಂತೆ ಇರಿಸಲಾಗಿದೆ.

ತರಗತಿ ಕೋಣೆಯ ಸುಂದರವಾದ ಗೋಡೆಯ ಚಾರ್ಟಗಳಿಂದ ವರ್ಣರಂಜಿತವಾಗಿ ಮಾಡಲಾಗಿದೆ. ಎಲ್ಲಾ ತರಗತಿಯ ಪಾಠಕ್ಕೆ ಸಂಬಂಧಿಸಿದ ವಿಷಯಗಳನ್ನು ಮಕ್ಕಳು ಇಷ್ಟಪಡುವ ಗೊಂಬೆಗಳು, ಪಕ್ಷಿಗಳು, ಕೀಟಗಳ ಮಾದರಿಯ ಚಾರ್ಟಿನಲ್ಲಿ ಶಿಕ್ಷಕಿಯವರು ಬರೆದು ಭಿತ್ತಿ ಪತ್ರಗಳ ಮಾದರಿಯಲ್ಲಿ ಅಂಟಿಸಿದ್ದಾರೆ.

## ಬೋಧನೋಪಕರಣಗಳು

ವಿಶೇಷವಾಗಿ ಕನ್ನಡ ವಿಷಯದಲ್ಲಿ 2017–18ನೇ ಸಾಲಿನ ಒಂದನೇ ತರಗತಿಯ ಒಬ್ಬ ವಿದ್ಯಾರ್ಥಿಯು ಅಕ್ಷರಗಳನ್ನು ಗುರುತಿಸುವಲ್ಲಿ ತೊಂದರೆ ಅನುಭವಿಸುವುದನ್ನು ಗಮನಿಸಿ, ಯಾವುದೇ ಚಟುವಟಿಕೆ ಮಾಡಿದರೂ ಅವನು ಅಕ್ಷರವನ್ನು ನೆನಪಿಸಿಕೊಳ್ಳುವಲ್ಲಿ ವಿಫಲನಾಗುತ್ತಿರುವುದನ್ನು ಗಮನಿಸಿದ ಸದರಿ ಶಿಕ್ಷಕಿಯಾದ ನಾನು ಆ ಮಗುವನ್ನು ನಿರಂತರ ಅವಲೋಕನಕ್ಕೆ ಒಳಪಡಿಸಿದಾಗ, ಆ ಮಗುವು ಯಾವಾಗಲೂ 1ನೇ ಏಣಿಯ ಗಣಿತ ಅಭ್ಯಾಸ ಪುಸ್ತಕದಲ್ಲಿರುವ ಗೊಂಬೆಯನ್ನು ಬಹಳವಾಗಿ ಇಷ್ಟಪಟ್ಟು ನೋಡುವುದನ್ನು ಗಮನಿಸಿ ಕನ್ನಡ ಅಕ್ಷರ ಕಲಿಕಾ ಹಂತದ ಎಲ್ಲಾ ಅಕ್ಷರಗಳನ್ನು ಆ ಗೊಂಬೆಗಳ ಮಾದರಿ ಮಾಡಿ ಅದರಲ್ಲಿಯೇ ಚಟುವಟಿಕೆ ಮಾದರಿಯಲ್ಲಿ ಕಲಿಸಿ ಪ್ರಸ್ತುತ ಆ ಮಗುವು ಎಲ್ಲ ಅಕ್ಷರಗಳನ್ನು ಸುಲಭವಾಗಿ ಗುರುತಿಸುವಂತೆ ಮಾಡಲಾಗಿದೆ. ಇಂತಹ ನಿದರ್ಶನಗಳಿಗೆ ಸಾಕ್ಷಿಯಾದ ಅತ್ಯುತ್ತಮ ಕಲಿಕಾ ವಿಧಾನ ಈ ನಲಿಕಲಿಯಾಗಿದೆ.

ಮಕ್ಕಳಲ್ಲಿ ಸಂತಸದಾಯಕ ಕಲಿಕೆ ಉಂಟಾಗುವ ಎಲ್ಲಾ ಪ್ರಯತ್ನಗಳನ್ನು ತರಗತಿ ಕೋಣೆಯಲ್ಲಿ ಮಾಡಲಾಗುತ್ತಿದೆ. ಸರಳ ಪ್ರಯೋಗಗಳ ಮೂಲಕ ವಿಜ್ಞಾನದ ಅರಿವು. ಮೋಜಿನ ಗಣಿತದ ಮೂಲಕ ತಾರ್ಕಿಕ ಆಲೋಚನೆ, ಪಪೆಟ್ ಶೋಗಳ ಮೂಲಕ ಆಕರ್ಷಕ ಕಲಿಕೆಯು ನಡೆಯುತ್ತದೆ.





ಪಪೆಟ್ ಶೋ

2018–19ನೇ ಸಾಲಿನಲ್ಲಿ ಸೊರಬ ತಾಲ್ಲೂಕಿನ ನಲಿ–ಕಲಿ ವಿಧಾನದ ಬೋಧನೆಯು ಹೇಗಿದೆ ಎಂಬುದನ್ನು ಅರಿಯಲು ನಮ್ಮ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಮಂಜುನಾಥ ಸರ್ ರವರು ನಮ್ಮ ಶಾಲೆಗೆ ಭೇಟಿ ನೀಡಿ ಭಾಷಾ ಕಲಿಕೆಯ ತರಗತಿಯನ್ನು ವೀಕ್ಷಣೆ ಮಾಡಿದರು. ಹಾಗೂ ತರಗತಿ ಕೋಣೆಯ ಬೋಧನಾ ಪರಿಸರವನ್ನು ಪ್ರಶಂಸಿಸಿದರು. ನಮ್ಮ ಹರೀಶಿ ಕ್ಲಸ್ಟ್ ರನ ಸಿ.ಆರ್.ಪಿ ಯಾದ ಶ್ರೀ ಆನಂದ ಕೆ.ಸಿ ಯವರು ನಿರಂತರವಾಗಿ ಭೇಟಿ ನೀಡುತ್ತಾ, ಶಾಲೆಯ ಮೊದಲ ಭೇಟಿಯ ಸಮಯದಲ್ಲಿ ಕಲಿಕಾ ಚಪ್ಪರವನ್ನು ಮಕ್ಕಳ ಹಳೆಯ ನೋಟ್ ಬುಕ್ ಗಳ ಕಟ್ಟನ್ನು ಬಳಸಿ ಹೇಗೆ ಉತ್ತಮಗೊಳಿಸಬೇಕೆಂದು ಸಲಹೆ ನೀಡಿದರು. ಅವರ ಸಲಹೆಯಂತೆ ಬಣ್ಣ ಬಣ್ಣವಾದ ಯಾವುದೇ ವೆಚ್ಚವಿಲ್ಲದ ಸುಂದರವಾದ ಚಪ್ಪರವನ್ನು ಮಾಡಲಾಗಿದೆ. ಶ್ರೀಯುತರು ಸದಾ ತಮ್ಮ ಭೇಟಿಯ ಮೂಲಕ ತರಗಗತಿ ವೀಕ್ಷಣೆ ಹಾಗೂ ತರಗತಿಯ ಪರಿಸರವನ್ನು ಉತ್ತಕಗೊಳಿಸಲು ಸಹಕಾರ ನೀಡುತ್ತಿದ್ದಾರೆ.

2018–19ನೇ ಸಾಲಿನ ಮೈಕ್ರೊ ಅಧ್ಯಯನದ ವೀಕ್ಷಕರಾದ ಶಿಕಾರಿಪುರ ತಾಲ್ಲೂಕಿನ ಬೇಗೂರಿನ ಸಿ.ಆರ್.ಪಿಗಳು ಹಾಗೂ ನಲಿ–ಕಲಿಯ ಎಮ್.ಆರ್.ಪಿಗಳಾದ ಶ್ರೀ ಚನ್ನೇಶ್ ಡಿ.ಬಿ ಸರ್ ರವರು ಅನೀರಿಕ್ಷಿತವಾಗಿ ನಮ್ಮ ಶಾಲೆಗೆ ಭೇಟಿ ನೀಡಿದರು. ಕಾರ್ಡುಗಳ ಜೋಡಣೆ, ವಾಚಕಗಳ ಜೋಡಣೆಯನ್ನು ಪರಿಶೀಲಿಸಿದರು. ಇನ್ನೂ ಹೆಚ್ಚಿನ ಕಲಿಕೋಪಕರಣ ತಯಾರಿಸುವಂತೆ ಸಲಹೆ ನೀಡಿದರು. ಸಾಮಾನ್ಯ ಜ್ಞಾನದ ವಿಷಯಕ್ಕೆ ಸಂಬಂಧಿಸಿದ ವಿಷಯಗಳನ್ನು ವಾಚಕದ ರೂಪದಲದಲ್ಲಿ ನಮ್ಮ ಶಾಲೆಯಲ್ಲಿ ಇಟ್ಟಿರುವುದನ್ನು ಮೆಚ್ಚಿದರು.

## ಸಾಮಾನ್ಯ ಜ್ಞಾನ ವಿಷಯಗಳ ವಾಚಕಗಳು

ನಮ್ಮ ಚಂದ್ರಗುತ್ತಿ ವ್ಯಾಪ್ತಿಯ ಶಿಕ್ಷಣ ಸಂಯೋಜಕರಾದ ಶ್ರೀ ದೀಪಕ ಸರ್ ರವರು ಶಾಲೆಗೆ ನಿರಂತರವಾಗಿ ಭೇಟಿ ನೀಡುತ್ತಿದ್ದು, ನಲಿ–ಕಲಿ ತರಗತಿಯ ವೀಕ್ಷಣೆಯಬ ಜೊತೆಗೆ, ಶಿಕ್ಷಕರ ನಲಿ–ಕಲಿ ಡೈರಿ ಹಾಗೂ ಮಕ್ಕಳ ಅಭ್ಯಾಸ ಪುಸ್ತಕಕ್ಕೆ ತಾಳೆಯಾಗುವುದನ್ನು ಖಚಿತ ಪಡಿಸಿಕೊಂಡರು. ಹಾಗೂ ಹವಾಮಾನ ನಕ್ಷೆಯು ಗುರುತಿಸುವಿಕೆಯನ್ನು ಮಕ್ಕಳಿಂದಲೇ ಕೇಳಿ ಉತ್ತರ ಪಡೆದುಕೊಂಡರು. ಶ್ರೀಯುತರು 2018–19ನೇ ಸಾಲಿನ ಮೈಕ್ರೊ ಅಧ್ಯಯನದ ಭೇಟಿಯನ್ನು ನೀಡಿ ಗುಂಪು ತಟ್ಟೆಗಳಲ್ಲಿ ಮಕ್ಕಳ ಚಲನೆ, ಮಕ್ಕಳೇ ಕಾರ್ಡುಗಳನ್ನು ತೆಗೆದುಕೊಳ್ಳುವುದು. ಚಟುವಟಿಕೆ ಮಾಡುವ ವಿಧಾನವನ್ನು ಪರೀಕ್ಷಿಸಿದರು. ಹಾಗೂ 3ನೇ ಏಣಿಯಲ್ಲಿ ಕಲಿಕೆಯಲ್ಲಿ ಹಿಂದುಳಿದಿರುವ ಅಂಕುಶ ಎ. ಎಂಬ ವಿದ್ಯಾರ್ಥಿಯ ಬಗ್ಗೆ ಹೆಚ್ಚಿನ ಗಮನ ಹರಿಸಲು ಶಿಕ್ಷಕಿಯವರಿಗೆ ತಿಳಿಸಿದರು.

ನಮ್ಮ ಸೊರಬ ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿಗಳಾದ ಶ್ರೀ ಆಂಜನೇಯ ಹೆಚ್.ಜಿ. ಯವರು ನಮ್ಮ ಶಾಲೆಯ ನಲಿ–ಕಲಿ ತರಗತಿಗೆ ಭೇಟಿ ನೀಡಿ ವಿಷಯವಾರು ಮಕ್ಕಳ ಪ್ರಗತಿಯನ್ನು ಪರಿಶೀಲಿಸಿ ಕಲಿಕೆಯನ್ನು ಖಾತ್ರಿ ಮಾಡಿಕೊಂಡರು. ಹಾಗೂ ತರಗತಿ ಕೋಣೆಯಲ್ಲಿರುವ ಆಕರ್ಷಕವಾದ ಗೋಡೆ ಚಿತ್ರಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಹಾಗೂ ಶಿಕ್ಷಕರ ದಿನಚರಿ ಮತ್ತು ಮಕ್ಕಳ ಅಭ್ಯಾಸ ಪುಸ್ತಕವನ್ನು ಪರೀಕ್ಷಿಸಿ ತಾಳೆಯಾಗಿರುವುದನ್ನು ಪರಿಶೀಲಿಸಿ, ಇನ್ನೂ ಹೆಚ್ಚಿನ ಶ್ರಮ ವಹಿಸಿ ಕಾರ್ಯ ನಿರ್ವಹಿಸಲು ಸಲಹೆ ನೀಡಿದರು.

ಒಟ್ಟಾರೆಯಾಗಿ ನಲಿ–ಕಲಿ ಒಂದು ಉತ್ತಮವಾದ ವಿಧಾನವಾಗಿದ್ದು, ಚಟುವಟಿಕೆ, ನಿರಂತರ ಮೌಲ್ಯಮಾಪನದಿಂದಾಗಿ ಎಲ್ಲಾ ಮಕ್ಕಳು ಕೂಡ ಉತ್ತಮ ಪ್ರಗತಿ ಸಾಧಿಸಲು ಸಾಧ್ಯವಾಗುತ್ತಿದೆ. ಹಾಗೆಯೇ ನಲಿ–ಕಲಿ ಮೈಕ್ರೋ ಮತ್ತು ಮ್ಯಾಕ್ರೋ ಅಧ್ಯಯನದಿಂದ ಶಿಕ್ಷಕರು ಅನುಸರಿಸಬೇಕಾದ ಬೋಧನಾ ವಿಧಾನಗಳು. ತರಗತಿಯ ಕೋಣೆಯ ಅಂದ ಹೆಚ್ಚುವ ವಿಧಾನಗಳ ಬಗ್ಗೆ ಸಲಹೆಗಳು ದೊರೆಯುತ್ತಿದ್ದು, ಉತ್ತಮ ಕಲಿಕೆ ಹಾಗೂ ಬೋಧನೆಗಾಗಿ ಅವಲೋಕನದ ಅಗತ್ಯವಿದೆ ಎಂಬುದನ್ನು ತಿಳಿಸುತ್ತದೆ.

ಮೇ 26, 2016 ರಲ್ಲಿ ಸೇವೆಗೆ ಸೇರಿದ ನಾನು ಪ್ರಥಮ ಬಾರಿಗೆ ಶಾಲೆಗೆ ಬಂದಾಗ ಶಾಲೆಯ ತರಗತಿ ಕೋಣೆಯು ಉತ್ತಮವಾಗಿಲ್ಲದಿರುವುದನ್ನು ಅವಲೋಕಿಸಿ, ನಲಿ–ಕಲಿ ತರಗತಿ ಕೋಣೆಯನ್ನು ಇನ್ನೊಂದು ಕೊಠಡಿಗೆ ಬದಲಾಯಿಸಿ ನಲಿ–ಕಲಿಕೆಗೆ ಪೂರಕವಾಗುವ ರೀತಿಯಲ್ಲಿ ಇಡೀ ತರಗತಿಯ ಚಿತ್ರಣವನ್ನೇ ಬದಲಾಯಿಸಿಸಲು ಪ್ರಯತ್ನಿಸುತ್ತಿದ್ದೇನೆ.





ಈ ಪ್ರಯತ್ನಕ್ಕೆ ಸಾಕಾರದಂತೆ ಈ ವರ್ಷ ನಮ್ಮ ಹರೀಶಿ ಕ್ಲಸ್ಟರಿನಲ್ಲಿ ನಡೆದ ಎಸ್.ಡಿ.ಎಮ್.ಸಿ. ತರಬೇತಿಯಲ್ಲಿ ನಮ್ಮ ಸೊರಬ ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯ ಅಧಿಕಾರಿಗಳಾದ ಶ್ರೀ ಆಂಜನೇಯ ಹೆಚ್.ಜಿ ಯವರು ನಲಿ–ಕಲಿ ಬೋಧನೆಯ ಪ್ರಗತಿ ಸಾಧಿಸುವ ಮಾರ್ಗಗಳು ಹಾಗೂ ಉತ್ತಮ ನಿರ್ಮಾಣ ಮಾಡುವಲ್ಲಿ ಶಿಕ್ಷಕರ ಪಾತ್ರದ ಬಗ್ಗೆ ಮನ ಮುಟ್ಟುವಂತೆ ತಿಳಿಸಿದರು. ಹಾಗೂ ಉತ್ತಮ ನಿರ್ಮಾಣ ಮಾಡುವಲ್ಲಿ ಶಿಕ್ಷಕರ ಪಾತ್ರದ ಬಗ್ಗೆ ಮನ ಮುಟ್ಟುವಂತೆ ತಿಳಿಸಿದರು. ಹಾಗೂ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಗಣೇಶ ಪಿ.ಎನ್ ಹಾಗೂ ಶ್ರೀ ಮಹಾದೇವ ಕೆ.ಸಿ ಯವರು ಶಿವಮೊಗ್ಗ ಜಿಲ್ಲೆಯ ಯಶೋಗಾಥೆ ಶಾಲೆಗಳ ವೀಡಿಯೋಗಳನ್ನು ತೋರಿಸಿದರು.ಆ ನಂತರದಲ್ಲಿ ಶಿಕ್ಷಕಿಯಾದ ನಾನು ನಮ್ಮ ಶಾಲೆಯನ್ನು ಆ ಯಶೋಗಾಥೆ ಶಾಲೆಗಳ ಪಟ್ಟಿಯಲ್ಲಿ ಸೇರಿಸಲು ಶ್ರಮಿಸುತ್ತಿದ್ದೇನೆ. ಅದರ ಮೊದಲ ಕಾರ್ಯವಾಗಿ ಶಾಲೆಯ ಬಣ್ಣವನ್ನು ರೈಲಿನ ಮಾದರಿಯಲ್ಲಿ ಮಾಡಿಸಿ, ಬಸ್ಸಿನ ವ್ಯವಸ್ಥೆಯೂ ಇಲ್ಲದ ಕಾಡಿನ ಸಮೀಪದಲ್ಲಿರುವ ಈ ಗ್ರಾಮದಲ್ಲಿ ಶಾಲೆಯು ಆಕರ್ಷಕವಾಗಿ ಕಾಣುವಂತೆ ಮಾಡಲು ಸಹಕರಿಸಿದ ಎಸ್.ಡಿ.ಎಮ್.ಸಿ. ಯ ಅಧ್ಯಕ್ಷರು ಹಾಗೂ ಎಲ್ಲಾ ಪದಾಧಿಕಾರಿಗಳಿಗೆ ಹಾಗೂ ವೈಕ್ತಿಕವಾಗಿ ಹಣವನ್ನು ನೀಡಿ ಸಹಕರಿಸಿದ ದಾನಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಹಾಗೆಯೇ ತರಗತಿ ಕೋಣೆಯ ಸ್ವಚ್ಛತೆ ಹಾಗೂ ಕಾಳಜಿ ಮತ್ತು ನನ್ನೊಂದಿಗೆ ಸದಾ ಇರುವ ಉತ್ಸಾಹದ ಚಿಲುಮೆಗಳಾಗಿ ನಲಿಯುತ್ತಾ ಕಲಿಯುವ ಹಾಗೂ ಅವರ ಕಲಿಕೆಯೊಂದಿಗೆ ನನಗೂ ಉತ್ಸಾಹ ಹೆಚ್ಚುವಂತೆ ಮಾಡುವ ನನ್ನೆಲ್ಲ ಪ್ರೀತಿಯ ವಿದ್ಯಾರ್ಥಿಗಳಿಗೂ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಸೊರಬ ತಾಲ್ಲೂಕಿನಾದ್ಯಂತ ನಲಿ–ಕಲಿ ಪ್ರಗತಿಗೆ ಶ್ರಮಿಸುತ್ತಿರುವ ನಮ್ಮ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಮಂಜುನಾಥ ಸರ್ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಧಿಕಾರಿಗಳಾದ ಶ್ರೀ ಆಂಜನೇಯ ಹೆಚ್.ಜಿ. ಯವರಿಗೆ ನಮ್ಮ ಈ ಯಶೋಗಾಥೆಯ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.





ಮಕ್ಕಳು ಮತ್ತು ಶಿಕ್ಷಕರು ಪರಿಸರ ಅಧ್ಯಯನ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿರುವುದು.





ಗೋಡೆ ಚಿತ್ರಗಳು










2019-20ನೇ ಸಾಲಿನ ವಿಷಯವಾರು ವಿಂಗಡಿಸಿದ ಕಲಿಕಾ ಚಪ್ಪರ















ಸಾರ್ವಜನಿಕ ಶಿಕ್ಷಣ ಇಲಾಖೆ, ಸೊರಬ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಸೊರಬ
ಇವರ ನೇತೃತ್ವದಲ್ಲಿ
ಡಾ|| ಸರ್ವಪಲ್ಲಿ ರಾಧಾಕೃಷ್ಣನ್ ರವರ 132ನೇ ಜನ್ಮ ದಿನಾಚರಣೆ ಅಂಗವಾಗಿ
ತಾಲ್ಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ / ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ
ಸನ್ಮಾನ ಸಮಾರಂಭ - 2019
2019.09.05 11:50